ಸಹ ಬರೆಸಿಕೊಂಡಿರುತ್ತಾರೆ. ಈ ಬಗ್ಗೆ, ಅದೇ ದಿನ ಹಾಸನ ನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದೆ.

ನಂತರ, ದಾಖಲಾತಿಗಳನ್ನು ಪರಿಶೀಲಿಸಿ, ಹಾಸನದಲ್ಲಿ ವಸತಿ ನಿವೇಶನಗಳನ್ನು ಕೋರಿ, 1400 ಹೆಚ್ಚಿನ ಅರ್ಜಿದಾರರು ಕರ್ನಾಟಕ ಗೃಹ ಮಂಡಳಿಗೆ ನೋಂದಾಯಿಸಿ ಅರ್ಜಿಗಳನ್ನು ಪರಿಗಣಿಸಿ, ಅದರಂತೆ, ಈ ಭೂಮಿಯು ವಸತಿ ಯೋಜನೆಗೆ ಅಗತ್ಯವಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಂಡು, ದಿನಾಂಕ: 18–1–2010ರಂದು, ಭೂಸ್ವಾಧೀನ ಕಾಯ್ದೆಯ ಕಲಂ 6(1)ರನ್ವಯ, ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆಯು, ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 4–2–2010ರಂದು ಪ್ರಕಟಗೊಂಡಿದ್ದು ಮುಂದಿನ ಕ್ರಮ ಬಾಕಿಯಿರುತ್ತದೆ.

ಮಾನ್ಯ ಸದಸ್ಯರಾದ ಸಿ.ಟಿ. ರವಿಯವರು ವಿಷಯ ಪ್ರಸ್ತಾಪಿಸಿ 6(1) notification ಅನ್ನು ಕೈಬಿಡಬೇಕೆಂದು ಹೇಳಿದ್ದಾರೆ. ಅದರ process ಎಲ್ಲ ನಡೆಯುತ್ತಿದೆ. ಈಗಾಗಲೇ ಹೇಳಿದ ಪ್ರಕಾರ, 1400ಕ್ಕೂ ಹೆಚ್ಚು ಅರ್ಜಿದಾರರು ನಮಗೆ ನಿವೇಶನ ಬೇಕೆಂದು ಹೇಳುತ್ತಿದ್ದು ಇಷ್ಟೊಂದು ಬೇಡಿಕೆ ಇದೆ. ನಿವೇಶನದಾರರಿಗೂ ಸಹಿತ ಬೇಡಿಕೆಗನುಗುಣವಾಗಿ ನಿವೇಶನಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಿದೆ. ಆ ದೃಷ್ಟಿಯಿಂದ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸಿ.ಟಿ.ರವಿ : ಸತ್ಯಮಂಗಲದಲ್ಲಿ ಮಾಡಿರುವುದರಲ್ಲಿ ಖಾಲಿ ಇದೆ. ಡೆವಲಪ್ ಮಾಡಿ ಸೈಟ್ ಕೊಟ್ಟಿದ್ದರಲ್ಲಾ ಅಲ್ಲಿಯೇ ಯಾರು ಮನೆ ಕಟ್ಟಿಲ್ಲ. ಅಂದರೆ ಮನೆ ಇದ್ದವರೆ ಮತ್ತೆ ನಿವೇಶನಕ್ಕೆ ಅರ್ಜಿ ಹಾಕಿದ್ದಾರೆಯೇ ಹೊರತು ಅವಶ್ಯಕವಾಗಿ ಮನೆ ಕಟ್ಟತಕ್ಕಂಥವರು ಸತ್ಯಮಂಗಲದಲ್ಲಿ ಕೊಟ್ಟಿರುವುದರಲ್ಲಿ ಮನೆ ಕಟ್ಟಿಲ್ಲ. ಅದನ್ನೆ ಕ್ಯಾನ್ಸಲ್ ಮಾಡಿ ನಿವೇಶನ ಕೊಡುವುದಕ್ಕೆ ಬರುತ್ತದೆ. ಇಲ್ಲಿರತಕ್ಕಂಥವರೆಲ್ಲ 10–20 ಗುಂಟೆ ಇರತಕ್ಕಂಥವರು. ಇದೇ ಏರಿಯಾದಲ್ಲಿರತಕ್ಕಂಥ ಬಲಾಢ್ಯರ ಜಮೀನನ್ನು ಬಿಟ್ಟಿದ್ದಾರೆ.

ಅಧ್ಯಕ್ಷರು : ಆಯಿತು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ ಬಿಡಿ.

ಶ್ರೀ ಸಿ.ಟಿ.ರವಿ: ಇದೇ ಏರಿಯಾದಲ್ಲಿರುವ ಬಲಾಢ್ಯರ ಜಮೀನು ಬಿಟ್ಟು ಬಡವರ ಭೂಮಿಯನ್ನು ವಶಪಡಿಸಿಕೊಳ್ಳುವುದು ಯಾವ ನ್ಯಾಯ? ದಯಮಾಡಿ ಕೈಬಿಡಬೇಕು. ಅದರ ಪಕ್ಕದಲ್ಲಿ ಬರುವಂಥ ಅದೇ ಬೌಂಡರಿಯಲ್ಲಿ ಬರುವ ಬಲಾಢ್ಯರ ಭೂಮಿ ಬಿಟ್ಟಿದ್ದಾರೆ. ಅಲ್ಲಿ ಬಡವರದು ಕೈಬಿಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರು ಹೇಳಿರುವುದನ್ನು ಮಾನ್ಯ ವಸತಿ ಸಚಿವರ ಗಮನಕ್ಕೆ ತರಲಾಗುವುದು.

ಆ) ವಿಷಯ : ಅರಣ್ಯ ಇಲಾಖೆಯ ಅಧಿಕಾರಿಗಳು ಮರಳು ಮತ್ತು ಜಲ್ಲಿ ಕಲ್ಲುಗಳ ಸಾಗಾಣಿಕೆಗೆ ಪದೇ ಪದೇ ತೊಂದರೆ ಕೊಡುತ್ತಿರುವ ಬಗ್ಗೆ.

ಶ್ರೀ ಸುನೀಲ್ ವಿ. ಹೆಗಡೆ : ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ನಾವು ಪ್ರಸ್ತಾಪಿಸಿದ ವಿಷಯ ಏನೆಂದರೆ, ನನ್ನ ಕ್ಷೇತ್ರವಾದ ಹಳಿಯಾಳ-ಜೊಯಿಡಾದಲ್ಲಿ ಸುಮಾರು 87 ರಷ್ಟು ಅರಣ್ಯ ಪ್ರದೇಶದಿಂದ ಕೂಡಿದ್ದು ಇಲ್ಲಿ ಹಲವಾರು ಸರ್ಕಾರ ಅಭಿವೃದ್ಧಿ ಕಾರ್ಯಕ್ರಮಗಳಾದ ಆಶ್ರಯ ಮನೆಯಿರಲಿ, ಸರ್ಕಾರದ ಬಿಲ್ಡಿಂಗ್‌ಗಳಿರಲಿ, ರಸ್ತೆಗಳನ್ನು ಮಾಡಲಿಕ್ಕೆ ಕಲ್ಲು ಮತ್ತು ಉಸುಕಿನ ಅವಶ್ಯಕತೆ ಇರುತ್ತದೆ. ಇಲ್ಲಿ ಎಲ್ಲವೂ ಕಾಡನ್ನೇ ಅವಲಂಬಿಸ ಬೇಕಾಗಿರುವುದರಿಂದ ಅರಣ್ಯ ಇಲಾಖೆಯವರು ಪ್ರತಿಯೊಂದು ಸಲ, ಒಂದು ಸಾರಿ ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ಹೇಳುತ್ತಾರೆ. ಮತ್ತೊಂದು ಸಾರಿ ಕೇಂದ್ರ ಸರ್ಕಾರದ ಕಾಯಿದೆಯ ಬಗ್ಗೆ ಹೇಳುತ್ತಾರೆ. ಒಂದೊಂದು ಸಲ ಒಂದೊಂದು ಕಾಯಿದೆಯ ಬಗ್ಗೆ ಹೇಳುತ್ತಾರೆ. ಅರಣ್ಯ ಇಲಾಖೆಯವರಿಗೆ ತಮ್ಮ ಕಾಮಗಾರಿಗಳನ್ನು ಮಾಡಿಕೊಳ್ಳಲಿಕ್ಕೆ ಏನೂ ತೊಂದರೆ ಮಾಡಿಕೊಳ್ಳುವುದಿಲ್ಲ. ಆದರೆ, ಬಡವರು ಆಶ್ರಯ ಮನೆ ಕಟ್ಟಿಕೊಳ್ಳಬೇಕಾದರೆ, ಸರ್ಕಾರದಿಂದ ಅಭಿವೃದ್ಧಿ ಕೆಲಸಗಳಿಗೆ ಬೇಕಾದ ಮರಳು ಬೇಕಾದರೆ ಅಥವಾ ವೈಯಕ್ತಿಕವಾಗಿ ಯಾರಾದರೂ ಮನೆ ಕಟ್ಟಬೇಕಾದರೆ ಮರಳು ಬೇಕಾದರೆ, ಸಾಕಷ್ಟು ಕೇಸ್‌ಗಳನ್ನು ಮಾಡಿ ತೊಂದರೆ ಕೊಡುತ್ತಿದ್ದಾರೆ. ಇದರ ಮೇಲೆ ಸಾವಿರಾರು ಜನ ಉದ್ಯೋಗವನ್ನು ಮಾಡುತ್ತಿದ್ದಾರೆ. ಹಲವಾರು ಸಾವಿರಾರು

ಕುಟುಂಬಗಳು ಇದರ ಮೇಲೆ ಅವಲಂಬಿತರಾಗಿದ್ದಾರೆ. ಹೀಗಾಗಿ ಈ ಬಗ್ಗೆ ಸರ್ಕಾರ ಕೂಡಲೆ ಕ್ರಮ ತೆಗೆದುಕೊಂಡು ಒಂದು ನಿರ್ದೇಶನ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ವಿಧಾನ ಸಭಾ ಸದಸ್ಯರು ಉತ್ತರ ಕನ್ನಡ ಜಿಲ್ಲೆ ಹಳಿಯಾಳ-ಜೊಯಿಡಾ ಕ್ಷೇತ್ರದಲ್ಲಿ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯಿಂದ ತೊಂದರೆಯಾಗುತ್ತಿರುವ ಬಗ್ಗೆ ಗಮನ ಸೆಳೆದಿದ್ದಾರೆ. ಉತ್ತರ ಕನ್ನಡ ಜಿಲ್ಲೆ ಹಳಿಯಾಳ-ಜೊಯಿಡಾ ಕ್ಷೇತ್ರವು ಅತೀ ಹೆಚ್ಚು ಪ್ರದೇಶವನ್ನು ಹೊಂದಿದ್ದು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಬರುತ್ತದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 115 ಎಫ್ಎಫ್ಎಂ 2001 ದಿನಾಂಕ: 26-02-2004ರಲ್ಲಿ ಕೆಲವು ಮಾರ್ಗಸೂಚನೆಗಳನ್ನು ಹೊರಡಿಸಲಾಗಿದೆ. ಈ ಮಾರ್ಗ ಸೂಚಿಗಳನ್ವಯ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಯಾದ ಗೃಹ ನಿರ್ಮಾಣ, ರಸ್ತೆ, ಸೇತುವೆ ಇತ್ಯಾದಿಗಳಿಗೆ ಅವಶ್ಯವಾದ ಕಲ್ಲು, ಜಲ್ಲಿ, ಮರಳು ಮುಂತಾದ ಸಾಮಗ್ರಿ ಪಡೆಯಲು 0.5 ಹೆಕ್ಟೇರ್‌ಗೆ ಮೀರದಂತೆ ಗಣಿಗಾರಿಕೆ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಪರಿಸರ ಹಾನಿಯಾಗದಿರುವಂತೆ ಕಾಪಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಅರಣ್ಯ (ಸಂರಕ್ಷಣೆ) ಕಾಯ್ದೆ, 1980ರ ಕಟ್ಟುನಿಟ್ಟಿನ ಆದೇಶದನುಸಾರ ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೇ ಅರಣ್ಯ ಪ್ರದೇಶಗಳಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆಗೆ ಅವಕಾಶ ಇಲ್ಲದಿರುವುದರಿಂದ ಪರವಾನಿಗೆಯನ್ನು ನೀಡಲಾಗಿರುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಕಲ್ಲು ಗಣಿಗಾರಿಕೆಗೆ ಅವಕಾಶ ನೀಡಲಾಗುವುದು.

ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ಬೇಕಾಗುವ ಜಲ್ಲಿ, ಮರಳು ಇತ್ಯಾದಿಗಳ ಅವಶ್ಯಕತೆಯನ್ನು ಗಮನದಲ್ಲಿ ಇಟ್ಟುಕೊಂಡು ಲೋಕೋಪಯೋಗಿ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಇವರುಗಳಿಗೆ ಪ್ರತಿ ತಾಲ್ಲೂಕಿನಲ್ಲಿ 2 ರಿಂದ 3 ಕ್ವಾರಿಗಳನ್ನು ನಡೆಸಲು ಅರಣ್ಯ (ಸಂರಕ್ಷಣೆ) ಕಾಯ್ದೆ 1980ರನ್ವಯ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆದು ಅನುಮತಿ ನೀಡಬಹುದೆಂದು ಹಾಗೂ ಉಪಯೋಗಿ ಸಂಸ್ಥೆಯಿಂದ ನಿಯಮಾನುಸಾರ NPV ಮೊತ್ತವನ್ನು ಪಾವತಿಸಿಕೊಳ್ಳುವಂತೆ ಮತ್ತು ಈ ಕ್ವಾರಿಗಳನ್ನು 5 ವರ್ಷಗಳವರೆಗೆ ಗುತ್ತಿಗೆಯನ್ನು ನೀಡಿ ತದನಂತರ ನವೀಕರಣ ಮಾಡಬಹುದೆಂದು ದಿನಾಂಕ: 16–01–2010 ರಂದು ತೀರ್ಮಾನಿಸಲಾಗಿದೆ.

ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯ ಸರ್ಕಾರದ ಅಭಿವೃದ್ಧಿ ಕಾಮಗಾರಿಗಳಿಗೆ ಅವಶ್ಯವಿರುವ ಕಲ್ಲು, ಜಲ್ಲಿ ಮತ್ತು ಮರಳು ಇತ್ಯಾದಿ ಸಾಮಗ್ರಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸುನೀಲ್ ವಿ. ಹೆಗಡೆ :– ಮಾನ್ಯ ಅಧ್ಯಕ್ಷರೆ, ದಿನಾಂಕ: 26–02–2004 ರಂದು ಕೆಲವು ಮಾರ್ಗಸೂಚನೆಗಳನ್ನು ಹೊರಡಿಸಲಾಗಿದೆ ಎಂದು ಹೇಳಿದ್ದಾರೆ. ಆದರೂ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಅವಶ್ಯಕವಾದ ಜಲ್ಲಿ, ಕಲ್ಲು, ಮರಳು ಇವುಗಳನ್ನು ತೆಗೆದುಕೊಳ್ಳಬೇಕೆಂದರೆ ಸಾಕಷ್ಟು ತೊಂದರೆಯಾಗುತ್ತಿದೆ. ಈ ಬಗ್ಗೆ ಹಲವಾರು ಸಾರಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ಬಂದಿದೆ. ಹಲವಾರು ಕೇಸ್‌ಗಳು ಆಗಿವೆ. ಟ್ರ್ಯಾಕ್ಟರ್‌ಗಳು ಸೀಜ್ ಆಗಿವೆ. ಕಳೆದ 8–10–15 ದಿನಗಳಿಂದ ದಾಂಡೇಲಿ ಮತ್ತು ಜೊಯಿಡಾ ಭಾಗದಲ್ಲಿ ಉಸುಕು ತೆಗೆದುಕೊಂಡು ಹೋಗುವುದಕ್ಕೆ ಬಿಡುತ್ತಿಲ್ಲ. ಕೇಸ್ ಮಾಡುತ್ತಿದ್ದಾರೆ. ಹೋದಂಥ ಟ್ರ್ಯಾಕ್ಟರ್‌ಗಳನ್ನು ಸೀಜ್ ಮಾಡಿದ್ದಾರೆ. ಈಗೆಲ್ಲಾ ಆದರೆ ಮುಂದಿನ ದಿನಗಳಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ತೊಡಕಾಗುತ್ತದೆ. ಜೊತೆಗೆ ಅದರ ಮೇಲೆ ಉಪ ಜೀವನ ನಡೆಸುವಂಥ ಹಲವಾರು

ಕುಟುಂಬಗಳು ನಿರ್ಗತಿಕರಾಗುತ್ತವೆ. ಕೂಡಲೆ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಬಗ್ಗೆ ಹೇಳಿದ್ದೇನೆ. ದಿನಾಂಕ: 16–01–2010 ರಂದು ಈ ಐದು ವರ್ಷಗಳವರೆಗೆ ಗುತ್ತಿಗೆ ನೀಡಿ ತದನಂತರ ನವೀಕರಣ ಮಾಡಬಹುದು ಎಂದು ಈಗಾಗಲೇ ಸರ್ಕಾರದ ಆಜ್ಞೆಯಾಗಿದೆ. ಅದರ ಬಗ್ಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾನಿರ್ಣಯದ ಮೇಲೆ ಚರ್ಚೆ, ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ತಾವು ಮಾತನಾಡಿ.

7. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾನಿರ್ಣಯದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದ ಉತ್ತರ :

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಧ್ಯಕ್ಷರೆ, ಘನತೆವೆತ್ತ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುವ ಪ್ರಸ್ತಾವನೆಯ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟ ತಮಗೆ ನಾನು ಮೊಟ್ಟ ಮೊದಲಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ರಾಜ್ಯಪಾಲರು ಸಂವಿಧಾನ ಬದ್ಧವಾಗಿ, ಸರ್ಕಾರದ ಸಮರ್ಥನೆಯನ್ನು ಮಾಡಿಕೊಂಡಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣ ನೋಡಿದಂಥ ಸಂದರ್ಭದಲ್ಲಿ ಬಹುಶ: ಅದು ಬಹಳ ಶುಷ್ಕವಾದಂಥ, ಒಂದು ಸತ್ವವಿಲ್ಲದೇ ಇರತಕ್ಕಂಥ ಭಾಷಣ ಎಂದು ಮನಸ್ಸಿಗೆ ನೋವಾದರೂ ಕೂಡ ಹೇಳಲೇಬೇಕಾಗುತ್ತದೆ. ಒಂದು ರೀತಿ ಸ್ಕೂಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ 'Character and conduct is good ಎಂದು certificate ಕೊಡುತ್ತಾರೆ. ನಾವೇನು ತಪ್ಪು ಮಾಡಿದರೂ ಕೂಡ ಅದನ್ನು ಅವರು ಕೊಡುತ್ತಾರೆ. ಅದೇ ರೀತಿ ಮಾನ್ಯ ರಾಜ್ಯಪಾಲರು, ಒಂದು ವರ್ಷದಲ್ಲಿ ನಡೆಸಿರತಕ್ಕಂಥ ಆಡಳಿತ ಏನು ಎಂಬುದರ ಬಗ್ಗೆ ಒಂದು certificate ಅನ್ನು